ಶ್ರೀ ಎಂ. ಚಂದ್ರಶೇಖರ್.— ಜಿಲ್ಲೆಯ ಹಿರಿಯ ಸದಸ್ಯರಾದ ಶ್ರೀ ಧರ್ಮಸಿಂಗ್‌ರವರು ಮತ್ತು ಖರ್ಗೆಯವರು ಇದ್ದಾರೆ. ನೀವುಗಳು ಸೇರಿ ಅಲ್ಲಿನ ಮ್ಯಾನೇಜ್‌ಮೆಂಟ್‌ನವರನ್ನು ಭೇಟಿ ಮಾಡಿ ಚರ್ಚೆ ಮಾಡಿದರೆ ವಿವಾದ ಬಗೆಹರಿಯುತ್ತದೆ, ನಿಮ್ಮ ಮಾತಿಗೆ ಒಪ್ಪಿಗೆ ಕೊಡಬಹುದು. ಆ ರೀತಿಯಲ್ಲಿ ಅದು ನಡೆಯಬೇಕೇ ಹೊರತು ಸರಕಾರ ಆದೇಶ ನೀಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಬಿ. ಶಾಣಪ್ಪ.— ಅಲ್ಲಿ ಹಂಗರ್ ಸ್ಟ್ರೈಕ್ ನಡೆಯುತ್ತಿದೆ. You have to help them.

ಶ್ರೀ ಧರ್ಮಸಿಂಗ್.— ನೀವು ಮಂತ್ರಿಗಳಾಗಿದ್ದೀರಿ, ನೀವೇ ಹೋಗಿ ಸಮಸ್ಯೆಯನ್ನು ಬಗೆಹರಿಸಿ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಮುದ್ನಾಳ್‌ರವರು ಹೋಗಿ ಒಂದು ಮಾತು ಹೇಳಿದರೆ ಆಗುತ್ತದೆ.

(ಗೊಂದಲ)

ಶ್ರೀ ಧರ್ಮಸಿಂಗ್.— ದೂರವಾಣಿ ಸಂಖಾಂತರ ಇಲ್ಲವೇ ಅಲ್ಲಿನ ಮುಖ್ಯಸ್ಥರನ್ನು ಕರೆಯಿಸಿ ಮಾತನಾಡಿದರೆ ಹಂಗರ್ ಸ್ಟ್ರೈಕ್ ನಿಲ್ಲುತ್ತದೆ.

ಶ್ರೀ ಕೆ. ಬಿ. ಶಾಣಪ್ಪ.— ಮಂತ್ರಿಗಳು ಸರಿಯಾದ ಉತ್ತರ ಕೊಡಬೇಕು.

ಅಧ್ಯಕ್ಷರು.— ನೀವು ಕುಳಿತುಕೊಳ್ಳಿ, ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ನೀವು ಈ ರೀತಿ ಮಾತನಾಡಿದರೆ ರೆಕಾರ್ಡ್ ಆಗುವುದಿಲ್ಲ. ಸಮಯದ ಮಹತ್ವ ತಮಗೆ ಗೊತ್ತಿಲ್ಲವೇ? Not to be recorded.

(ಈ ಹಂತದಲ್ಲಿ ಮಾನ್ಯ ಶಾಣಪ್ಪನವರು ಪೆಲ್‌ಗೆ ಬಂದರು)

ಅಧ್ಯಕ್ಷರು.— ನೀವು ನಿಮ್ಮ ಜಾಗಕ್ಕೆ ಹೋಗಿ ಕುಳಿತುಕೊಳ್ಳಿ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ಪ್ರತಿ ದಿವಸ ಕಾಲಿಂಗ್ ಅಟೆನ್‌ಷನ್ ಇರುತ್ತವೆ.

(ಗೊಂದಲ)

Mr. Speaker.— Nothing will be recorded.

(Interruption)

ನೀವು ಅವರ ಜೊತೆಯಲ್ಲಿ ಹೋಗಿ ಮಾತನಾಡಿ. Whatever you say it is expunged.

(ಗೊಂದಲ)

ಅಧ್ಯಕ್ಷರು.— ಈ ರೀತಿ ಮಾತನಾಡಿದರೆ ತಮ್ಮನ್ನು ಹೊರಕ್ಕೆ ಹಾಕಬೇಕಾಗುತ್ತದೆ. ಅವರ ಪಕ್ಕದಲ್ಲಿ ಹೋಗಿ ಕುಳಿತುಕೊಂಡು ಮಾತನಾಡಿ. ಬೇರೆ ವಿಷಯ ಇದೆ.

(IV) ಮೈಸೂರು ನಗರದ ನಾಗರೀಕರಿಗೆ ಕಳೆದ ಆರು ತಿಂಗಳಿನಿಂದ ನೀರು ಸರಬರಾಜಿನಲ್ಲಿ ಆಡಚಣೆ ಉಂಟಾಗಿರುವುದು

ಶ್ರೀ ವೇದಾಂತ ಹೆಬ್ಬಿಗೆ.— ಮಾನ್ಯ ಅಧ್ಯಕ್ಷರೆ, ಮೈಸೂರು ನಗರದ ನಾಗರೀಕರಿಗೆ ಕಳೆದ ೬ ತಿಂಗಳಿನಿಂದ ನೀರು ಸರಬರಾಜಿನಲ್ಲಿ ಉಂಟಾಗಿರುವ ಸಮಸ್ಯೆ ಬಗ್ಗೆ ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಾನೂ ಕೂಡ ಇದೇ ವಿಚಾರದ ಬಗ್ಗೆ ಮಾನ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಪಿ. ಜಿ. ಆರ್, ಸಿಂಧ್ಯ.— ಮಾನ್ಯ ಅಧ್ಯಕ್ಷರೆ, ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಮೈಸೂರು ನಗರದಲ್ಲಿ ಹಾಲಿ ಸುಮಾರು ೬ ಲಕ್ಷ ಜನಸಂಖ್ಯೆಯು ಇರುತ್ತದೆ. ಈಗ ಕಾವೇರಿ ನದಿ ಮತ್ತು ಸುಮಾರು ೯೦ ಕೊಳವೆ ಬಾವಿಗಳಿಂದ ನಗರಕ್ಕೆ ನೀರು ಸರಬರಾಜು ಮಾಡಲಾಗುತ್ತಿದೆ. ಈ ಎರಡು ಮೂಲಗಳಿಂದ ದಿನ ೧ಕ್ಕೆ ಸುಮಾರು ೧೯ ಮಿಲಿಯನ್ ಗ್ಯಾಲನ್ ಪ್ರಮಾಣದ ನೀರನ್ನು